# ಎಸ್. ಶಾಂತನಾಯ್ಕ ಅವರ ಕಥೆಗಳಲ್ಲಿ ಸಾಮಾಜಿಕ ಪ್ರಜ್ಞೆ

**ಉತ್ತಂಗಿ ವೀರೇಶ**

ಅಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.

**Received: 16-06-2024 ; Acepted: 10-07-2024 ; Published: 11-08-2024**

**DOI: https://doi.org/10.5281/zenodo.13284113**

**ABSTRACT:**

ಎಸ್. ಶಾಂತನಾಯ್ಕ ಅವರು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಇಂಗ್ಲೀಷ್ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಕಥೆ, ಕವನ, ಕಾದಂಬರಿ ನಾಟಕ ಕ್ಷೇತ್ರಗಳಲ್ಲಿ ತಮ್ಮನ್ನು ದುಡಿಸಿಕೊಳ್ಳುತ್ತಿದ್ದಾರೆ. ಸಮಕಾಲೀನ ಸಂದರ್ಭದಲ್ಲಿ ಲಂಬಾಣಿ ಬುಡಕಟ್ಟು ಜನರ ಕುಂದುಕೊರತೆಗಳನ್ನು ತಮ್ಮ ಸಾಹಿತ್ಯದ ಮೂಲಕ ಅನಾವರಣಗೊಳಿಸುವ ಸಾಹಸ ಮಾಡುತ್ತಿದ್ದಾರೆ. “ಕಲ್ಲೇ ಕಲ್ಲೇ ಕಥೆ ಹೇಳು” ಕಥಾ ಸಂಕಲನವು ಅವಕಾಶ ವಂಚಿತ ಹಳ್ಳಿಗರ ಬದುಕು ಕುರಿತು ಚಿತ್ರಿಸುತ್ತದೆ.

**KEYWORDS:**

ಹನ್ಮಜ್ಜ , ಎಕ್ಕಡ, ಬೆತ್ತಪ್ಪ , ಜುಲ್ಪ , ಹೋರಾಟ, ಪಿಂಡ, ಡೊಣ್ಣನಾಯ್ಕ , ಆಘಾತ.

ಆಧುನಿಕ ಕನ್ನಡ ಸಾಹಿತ್ಯವು ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯದಂತೆ ಹಲವು ವಿಭಿನ್ನ ಮಜಲುಗಳಲ್ಲಿ ಸಾಗಿಬಂದಿದೆ. ಅದು ಅಂದಂದಿನ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗೆ ಹಾಗೂ ಒತ್ತಡಗಳಿಗನುಸಾರವಾಗಿ ರೂಪುಗೊಂಡಿರುತ್ತದೆ. ಸಮಕಾಲೀನ ಪರಿಸರದ ಪ್ರೇರಣೆ ಮತ್ತು ಪ್ರಭಾವಗಳಿಗೆ ಒಳಗಾಗಿ ಹೊಸ ಸಾಹಿತ್ಯ ಚಿಂತನೆ ಸೃಷ್ಠಿಗೊಳ್ಳುವುದು ಸಹಜ ಪ್ರಕ್ರಿಯೆ ಎಂಬಂತೆ ಹಿಂದಿನಿಂದಲೂ ಸಾಗಿಬಂದಿದೆ. ಕ್ರಿ.ಶ. 1990 ರ ದಶಕದಿಂದೀಚೆಗೆ ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಮಜಲುಗಳು ಕರಗಿ ಕೇವಲ ಪರಿಸರ, ಪ್ರಾದೇಶಿಕತೆ, ಜನಾಂಗ, ಭಾಷೆ, ಲಿಂಗ, ವರ್ಗ ಈ ಮೊದಲಾದ ನೆಲೆಗಳಲ್ಲಿ ಹರಿದು ಬರುತ್ತಿರುವುದನ್ನು ಕಾಣಬಹುದು. ಇಂಥ ತಾತ್ವಿಕ ನೆಲೆಗಳಲ್ಲಿ ಸಾಹಿತ್ಯ ರಚಿಸಿ ಪ್ರಕಟಿಸುತ್ತಾ ಕನ್ನಡಿಗರ ಗಮನ ಸೆಳೆಯುತ್ತಿರುವವರು ಪ್ರೊ. ಎಸ್. ಶಾಂತನಾಯ್ಕರವರು ಎಂದರೆ ತಪ್ಪಾಗಲಾರದು.

ಪ್ರೊ. ಶಾಂತನಾಯ್ಕರವರು ಕಥೆ, ಕಾದಂಬರಿ, ಕವನ,ಮೊದಲಾದ ನೆಲೆಗಳಲ್ಲಿ ಸಾಹಿತ್ಯರಚಿಸುತ್ತಾ ಬಂದಿದ್ದಾರೆ. ಇವರ ‘ತಾಂಡ’ ಕಾದಂಬರಿಯು ಶಿರಗಾನಹಳ್ಳಿ ಪರಿಸರದ ಲಂಬಾಣಿ ತಾಂಡದ ಜನರ ಸಂಸ್ಕೃತಿಯನ್ನು ಆಧರಿಸಿ ರಚಿಸಲ್ಪಟ್ಟಿದ್ದು, ಇಡೀ ನಾಡಿನ ಸಾಹಿತ್ಯಾಸಕ್ತರ ಗಮನಸೆಳೆಯುತ್ತಿರುವುದನ್ನು ಪ್ರಸ್ತುತ ಸಂದರ್ಭದಲ್ಲಿ ಕಾಣಬಹುದು.

ಶಾಂತನಾಯ್ಕರವರು ರಾಜ್ಯದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ತಮ್ಮದೇ ಭಾಷೆ ಸಂಸ್ಕೃತಿ ಹೊಂದಿರುವ ಲಂಬಾಣಿ ಜನಾಂಗದ ನೋವು ನಲಿವುಗಳನ್ನು ಜೊತೆಗೆ ಇತರೆ ಜನರ ಬದುಕನ್ನು ಕಥೆ-ಕಾದಂಬರಿಯ ವಸ್ತುವಾಗಿಸಿಕೊಂಡು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 'ಕಲ್ಲೇ ಕಲ್ಲೇ ಕಥೆಹೇಳು' ಕಥಾಸಂಕಲನದ ಎಂಟು ಕಥೆಗಳಲ್ಲಿರುವ ಸಾಮಾಜಿಕ ಪ್ರಜ್ಞೆಯನ್ನು ಪ್ರಸ್ತುತ ಲೇಖನದಲ್ಲಿ ಅಧ್ಯಯನಕ್ಕೆ ಒಳಪಡಿಸಿ ವಿಮರ್ಶಿಸಲಾಗಿದೆ. ಇವು ಶಾಂತನಾಯ್ಕರವರ ಬದುಕಿನಲ್ಲಿ ಘಟಿಸಿದ ನೈಜ ಘಟನೆಗಳನ್ನ ಆಧರಿಸಿವೆ. ಅಲ್ಲದೆ ಪ್ರಸ್ತುತ ಸಂಧರ್ಭದ ಬದಕನ್ನು ಪ್ರತಿಬಿಂಬಿಸುತ್ತವೆ.

**ಹನ್ಮಜ್ಜನೂ ಎಕ್ಕಡವಿಲ್ಲದೂರೋ** ಕಥೆಯು ಬುಕ್ಕಾಟ್ನಳ್ಳಿ ಮಾದರ ಕೇರಿಯ ಹನ್ಮಜ್ಜ ಸಂದಣಿಕೆ ತಾಂಡಕ್ಕೆ ಹೋಗಿ ಕೆಲ ದಿನಗಳ ಕಾಲ ಅಲ್ಲೇ ತಂಗಿ ತಾಂಡದ ಜನರ ಚಪ್ಪಲಿಗಳನ್ನು ಒಲಿದುಕೊಡುವ ಕಾಯಕ ಮಾಡುತ್ತಿದ್ದ. ಅಲ್ಲಿನವರು ಕೊಟ್ಟಷ್ಟು ಹಣ ದವಸ ಧಾನ್ಯಪಡೆದು ತನಗೆ ಸಾಕೆನಿಸಿದಾಗ ಊರಿಗೆ ಹಿಂತಿರುಗುತ್ತಿದ್ದ. ದಿನನಿತ್ಯ ಸಂದಣಿಕೆ ತಾಂಡದಲ್ಲಿ ಇರುವವರೆಗೂ ಯಾರಾದರೂ ಊಟಕ್ಕೆ ಕರೆದರೆ ಉಣ್ಣುತ್ತಿದ್ದ. ಇಲ್ಲವೇ ತಾನೇ ಪರಿಚಯಸ್ಥರನ್ನ ಕೇಳಿ ಉಣ್ಣುತ್ತಿದ್ದ. ಆತನ ಬಗ್ಗೆ ತಾಂಡದಲ್ಲಿ ಪ್ರೀತಿ ಗೌರವ ಇತ್ತು. ಹಿರಿಯರ ಪಾಲಿಗೆ ಹನುಮ ಕಿರಿಯರಿಗೆ ಹನ್ಮಜ್ಜ ಎಂದು ಕರೆಯಿಸಿಕೊಳ್ಳುತ್ತಿದ್ದ. ಸಂದಣಿಕೆ ತಾಂಡವೇ ಆತನ ಕಾರ್ಯಕ್ಷೇತ್ರವಾಗಿತ್ತು.

ಈ ತಾಂಡದಲ್ಲಿ ಸಾಮ್ಕಿ ಎಂಬುವವಳು ಗಂಡನನ್ನು ಬಿಟ್ಟು ಪೇಟೆ ಸೇರಿ ಅಲ್ಲೊಬ್ಬ ದೊಡ್ಡ ಮಾಲಿಕ ಸಾಬಿಯನ್ನು ಇಟ್ಟುಕೊಂಡಿದ್ದಳು. ಅವನು ತನ್ನ ಹೆಂಡತಿಗೆ ಕೊಟ್ಟ ಸೌವಲತ್ತು ಸಾಮ್ಕಿಗೆ ಕೊಟ್ಟಿದ್ದ. ವರ್ಷಕ್ಕೆ ಒಂದು ಸಲ ತಾಂಡಕ್ಕೆ ಬರುತ್ತಿದ್ದಳು. ಅವಳ ಮಕ್ಕಳು ಕಾಲಲ್ಲಿ ಚಪ್ಪಲಿ ಹಾಕಿಕೊಂಡು ಬಂದಿದ್ದನ್ನು ತಾಂಡದ ಜನ ಆಶ್ಚರ್ಯದಿಂದ ನೋಡುತ್ತಿದ್ದರು. ತಾಂಡದ ಪಡ್ಡೆ ಹುಡುಗರು 'ತಾವೂ ಹಾಗೆ ಯಾವಾಗ ಬದುಕುತೀವೋ' ಎಂದು ಆಲೋಚಿಸುತ್ತಿದ್ದರು. ಪೇಟೆಗೆ ಹೋದಾಗ ಅಲ್ಲಿ ಯಾರೋ ಬಿಟ್ಟ ಹರಿದ ಚಪ್ಪಲಿ ತಂದು ತಂತಿಸುತ್ತಿ ಮೆಟ್ಟುತ್ತಿದ್ದ ದಲ್ಲಾಳಿ ದುರುಮಲನಾಯ್ಕನ ಶೋಚನೀಯ ಸ್ಥಿತಿಯನ್ನು ಹಾಗೂ ತಾಂಡದ ಯುವಕರು ಚಪ್ಪಲಿ ಮೆಡದಿರುವ ನೈಜ ಸನ್ನಿವೇಶವನ್ನು ಕಥೆಗಾರರು ತೆರದಿಡುತ್ತಾರೆ. ಹಾಗೆಯೇ ತಾಂಡದ ಕೆಲ ಹೆಂಗಸರು ಕಳವಿನಲ್ಲಿ ಹೆಂಡಕುಡಿಯುವುದನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದು.

ಸಂಪ್ರದಾಯಸ್ಥ ಮನಸುಗಳು ಮದುವೆಗಿಂತ ಮೊದಲು ಹುಡುಗಿ ಹುಡುಗನ ಮನೆಗೆ ಬರುವುದನ್ನು ಒಳಗೊಳಗೆ ವಿರೋಧ ವ್ಯಕ್ತಪಡಿಸುವುದನ್ನು ಪ್ರೊ. ಶಾಂತನಾಯ್ಕರವರು **ಬೆತ್ತಪ್ಪನ ಮಗ ಜುಲ್ಪನೂ** ಎಂಬ ಕಥೆಯಲ್ಲಿ ಚಿತ್ರಿಸಿದ್ದಾರೆ. ಕಥೆಯ ನಾಯಕ ಜುಲ್ಫಾ. ಅವನ ಅಣ್ಣ ಇರೂಪ ಒಬ್ಬ ಬಿಳಿ ಹುಡುಗಿಯನ್ನು ಮದುವೆಯಾಗಲು ನಿಶ್ಚಯಸಿದ್ದ. ಅವನು ತನ್ನ ಭಾವಿಪತ್ನಿಯನ್ನು ಮನೆಗೆ ಕರೆದುಕೊಂಡು ಬರುವನೆಂಬ ಗಾಳಿ ಸುದ್ದಿ ನಂಬಿದ ಜುಲ್ಫಾ ಎಂದೂ ಮನೆ ಕೆಲಸ ಮಾಡಲಾರದವನು ಅಂದು ತಾನೆ ಸ್ವಯಂ ತಿಳಿದು ಎಲ್ಲಾ ಕಸ ಮುಸುರಿ ಮಾಡಿ ಮನೆಯನ್ನು ಸ್ವಚ್ಛಗೊಳಿಸಿ ಕಾದು ಕುಳಿತಿದ್ದವನಿಗೆ ನಿರಾಶೆ ಉಂಟಾಯಿತು. ಏಕೆಂದರೆ ಊರಿಂದ ತಾಯಿ ಸುಕ್ರಿ ಮತ್ತು ಅಣ್ಣ ಇರೂಪ ಇಬ್ಬರೇ

ಬಂದಿದ್ದರು. ಬಿಳಿ ಹುಡುಗಿ ನೋಡಲು ಊರಿನ ಬಹುಮಂದಿ ಅವರ ಮನೆ ಹತ್ತಿರ ನೆರೆದಿದ್ದರು ಅದರಲ್ಲಿ ಮುದುಕಿಯರು ಸೇರಿದ್ದರು. ಇರೂಪ ತನ್ನ ಭಾವಿಪತ್ನಿ ಬಿಳಿ ಹುಡುಗಿಯನ್ನು ಊರಿಗೆ ಕರೆತರುವನೆಂದು ಸಿದ್ಲಿಂಗ ಸುದ್ದಿ ಹಬ್ಬಿಸಿದ್ದ. ಆ ಸುದ್ಧಿ ಊರ ತುಂಬೆಲ್ಲಾ ಹರಡಿ-ದೊಡ್ಡ ವಿಷಯವಾಗಿತ್ತು. ಕೇವಲ ಒಂದು ಸಣ್ಣ ವಿಷಯವು ಹಳ್ಳಿಗಳಲ್ಲಿ ದೊಡ್ಡ ಸುದ್ದಿಯಾಗಿ ಹೇಗೆ ಹಬ್ಬುತ್ತದೆ ಎಂಬದನ್ನು ಈ ಕಥೆಯ ಮೂಲಕ ತಿಳಿದು ಬರುತ್ತದೆ.

**ಹೋರಾಟದ ಕೊನೆಗೊಂದು ದಿನ** ಕಥೆಯು ಗೌಡರು ಮತ್ತು ತಾಂಡದ ಜನರ ನಡುವಿನ ಸಂಘರ್ಷವನ್ನು ತಿಳಿಸುತ್ತದೆ. ಜಂಬೇಗೌಡ ತಾಂಡದ ಬಡವರಿಗೆ ಸಾಲ ನೀಡುವುದರ ಮೂಲಕ ಅವರ ರಕ್ತ ಹೀರುವ ಜಿಗಣಿಯಾಗಿದ್ದ. ತಾಂಡದಲ್ಲಿ ಸಾಲ ಪಡೆದವನ ಪತ್ನಿ, ಮಗಳು ಚಲುವೆಯಾಗಿದ್ದರೆ ಸಾಕು ಅವರು ತನ್ನ ಮಂಚ ಹತ್ತಬೇಕು ಎಂದು ಬಯಸುತ್ತಿದ್ದ. ಅದು ಸಾಧ್ಯವಾಗದಿದ್ದರೆ ಸಾಲ ಪಡೆದವನು ತನ್ನ ಜಮೀನನ್ನು ಸಾಲ ತೀರಿಸಲು ಗೌಡನಿಗೆ ಬರೆದುಕೊಡಬೇಕು. ಅವರು ಜಮೀನು ಬರೆದುಕೊಡ್ಡದಿದ್ದರೆ ಗೌಡರು ತಮ್ಮ ಆಳುಗಳಾದ ಸರ್ಪ ಭರಮರಿಂದ ಸಾಲ ಪಡೆದವರ ಮೇಲೆ ಹಲ್ಲೆ ಮಾಡಿಸುವುದು ಮಾಮೂಲಾಗಿತ್ತು. ಭೀಮ್ಲ ಗೌಡರಿಂದ ಸಾಲಪಡೆದು ತನ್ನ ಹೊಲವನ್ನು ಸಾಗುವಳಿ ಮಾಡುತ್ತಿದ್ದ ತುಂಬಾ ಮರ್ಯಾದಸ್ಥ. ಸಾಲ ಬಡ್ಡಿ , ಚಕ್ರ ಬಡ್ಡಿ ಆಗಿ ತುಂಬಾ ಬೆಳೆದು ಜಾಸ್ತಿ ಆಗಿತ್ತು. ಅದನ್ನು ವಸೂಲಿ ಮಾಡಲು ಗೌಡರ ಆಳುಗಳು ಬಂದು ಬೀಮ್ಲನ ಹೆಂಡತಿ ರೂಪ್ಲಿ(ಸೋಮ್ಲಿ )ಯನ್ನು ಎಳೆದಾಡಿ ಅವಮಾನಿಸುತ್ತಿದ್ದರು. ಇದನ್ನು ಕೇಳಿದ ಊರಿನ ಯುವಕರ ತಂಡ ಆಳುಗಳನ್ನು ಹಿಗ್ಗಾಮುಗ್ಗಾ ಹೊಡೆದು ಓಡಿಸಿದರು. ಆ ಯುವಕರೇ ತಾಂಡದ ಜನರಿಗೆ ಧೈರ್ಯ ತುಂಬಿ ಎಲ್ಲರೂ ಒಗ್ಗಟ್ಟಾಗುವಂತೆ ಮಾಡಿದರು. ಅಲ್ಲದೆ ತಾಂಡದ ದೇವ್ಲನ ಕುತಂತ್ರದಿಂದ ಬಂದಿದ್ದ ಸರಾಯಿ ಅಂಗಡಿಯನ್ನು ತೆಗೆಸಿದರು. ಪೀರಜ್ಜನಂಥ ಪ್ರಭುದ್ದ ತಾಂಡದ ಯುವಕರಿಗೆ ವಿದ್ಯೆ ಕಲಿಯಲು ಪ್ರೋತ್ಸಹಿಸುವುದು ಗಮನಿಸಿದರೆ ತಾಂಡದಲ್ಲಿಯೂ ಎಲ್ಲಾ ಸಮಸ್ಯೆಗಳಿಗೆ ಶಿಕ್ಷಣ ಪರಿಹಾರ ಎಂದು ಯೋಚಿಸುವವರಿದ್ದಾರೆಂದು ತಿಳಿದು ಬರುತ್ತದೆ.

ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ನಡೆಯುವ ಅಕ್ರಮ ಸಂಬಂಧ ಮತ್ತು ಆ ಸಂಬಂಧದ ಫಲದಿಂದ ಉಂಟಾಗುವ ಕಳ್ಳಬಸಿರು, ಇದರಿಂದ ಮಾನ ಉಳಿಸಿಕೊಳ್ಳಲು ಒಡಲ ಬಳ್ಳಿಯನ್ನು ಕತ್ತರಿಸಿ ಪಿಂಡವನ್ನು ಬಾವಿಗೆ ಎಸೆದ ದಾರುಣ ಸ್ಥಿತಿಯನ್ನು ಕಥೆಗಾರರು **ಅಪ್ರಾಪ್ತಪಿಂಡ** ಕಥೆಯಲ್ಲಿ ಹೆಣೆದ್ದಾರೆ. ಇಂಥ ಘಟನೆಗಳು ಇಂದಿಗೂ ನಡೆಯುತ್ತವೆ ಎಂಬುದನ್ನು ನಿರೂಪಿಸಿದ್ದಾರೆ. ಸೂಪುರ ಒಂದು ಸಣ್ಣ ತಾಲೂಕು ಕೇಂದ್ರ ಅಲ್ಲಿನ ಗುಂಡಿ ಬಾವಿಯಲ್ಲಿ ಗಂಡು ಕೂಸೊಂದು ಬಿದ್ದಿರುವುದನ್ನು ಕಂಡ ಸ್ತ್ರೀಯರು ಮನಸ್ಸಿಗೆ ಬಂದಂತೆ ಮಾತಾಡಿಕೊಳ್ಳುತ್ತಿದ್ದರು. ಆ ಬಾವಿಯ ಹತ್ತಿರ ಎಲಿ ಮಾರುವವರ ಓಣಿ. ಕುರುಬರು, ಬ್ಯಾಡರು, ಮಾದರು, ಮುಸ್ಲಿಮರು, ಒಡ್ಡರು ಮುಂತಾದ ಜನರು ಹೆಣ್ಣು-ಗಂಡುಗಳೆನ್ನದೆ ಆ ಕೂಸನ್ನು ನೋಡಲು ಸೇರಿದ್ದರು. ಊರಿನ ಜನರಿಗೆ ಅಕ್ರಮ ಸಂತಾನದ ಬಗ್ಗೆ ಇರುವ ಕುತೂಹಲವನ್ನು ಇದು ಸೂಚಿಸುತ್ತದೆ. ಮಾದರ ಚೆನ್ನಿ ಬ್ಯಾಡರ ಲಿಂಗ ಹುಸೇನ್ ಬಿ ಸೇರಿಕೊಂಡು 'ಯಾವ ಬಿಕನಾಸಿ ಕೆಲಸ ಇರಬಹುದು' ಎಂಬ ಅವರ ಸಂಶಯದ ಮಾತಗಳು ಈ ಅಕ್ರಮ ಸಂತಾನದ ಮೂಲ ಶೋಧಕ್ಕೆ ತೊಡಗುವಂತೆ ಮಾಡಿದೆ. ಕೆಲವರು

ಕಾಲೇಜಿಗೆ ಹೋಗುವ ಹುಡಿಗಿಯರ ಬಗ್ಗೆ ಅನುಮಾನ ಪಟ್ಟರೆ, ಇನ್ನು ಕೆಲವರಿಗೆ ಆಗ ತಾನೆ ಪ್ರಾಯಕ್ಕೆ ಬಂದ ಹುಡುಗಿಯರ ಕಡೆ ನೋಡುವಂತೆ ಮಾಡಿದೆ. ಮತ್ತೆ ಕೆಲವರು ನಗರಸಭಾ ಅಧ್ಯಕ್ಷ ಸಾಗಣ್ಣೊರ್‌ದೇ ಈ ಕೆಲಸ ಎಂದು ಮಾತಾಡಿಕೊಳ್ಳುವಂತೆ ಮಾಡಿದೆ. ಯಾರು ಎಷ್ಟೇ ಆಲೋಚಿಸಿದರೂ ಈ ಅಪ್ರಾಪ್ತ ಪಿಂಡ ಯಾರದೆಂದು ನಿಗೂಢ ರಹಸ್ಯ ಕಂಡು ಹಿಡಿಯಲು ಸಾಧ್ಯವಾಗದಿರುವುದು ಕಥೆಗಾರರಿಗೆ ಯಕ್ಷಪ್ರಶ್ನೆಯಾಗಿ ಕಂಡಿರುವುದನ್ನು ಗಮನಿಸಿದಾಗ ಅಕ್ರಮ ಸಂತಾನಗಳು ಇಂದಿಗೂ ನಿಗೂಢತೆಯನ್ನುಕಾಯ್ದುಕೊಂಡಿರುವುದು ಕಂಡುಬರುತ್ತದೆ. ಆ ಪಾಪದ ಹೆಣ್ಣು ತಾನು ಅಪವಿತ್ರ ಆಗಿದ್ದಲ್ಲದೆ ಕುಡಿಯುವ ನೀರಿನ ಬಾವಿಗೆ ಪಾಪದ ಪಿಂಡ ಎಸೆದು ಆ ನೀರನ್ನು ಅಪವಿತ್ರಗೊಳಿಸಿದ್ದನ್ನು ಕಂಡಾಗ ಆ ಸ್ತ್ರೀ ಗೆ ಆ ಊರಿನ ಸಮಾಜದ ಜನರ ಬಗ್ಗೆ ಎಂಥ ಸೇಡಿನ ಭಾವನೆ ಬಂದಿರಬಹುದೆಂದು ಯೋಚಿಸಬಹುದು. ನಗರ ಸಭೆಯವರು ಕೊಟ್ರಿ ಎಂಬುವನಿಂದ ಆ ಮಗುವಿನ ಹೆಣ ತೆಗೆಸಲು ಬಾವಿಗೆ ಇಳಿಸಿದಾಗ ಅಲ್ಲಿ ಒಬ್ಬ ಮಹಿಳೆಯ ಹೆಣ ಸಿಗುತ್ತದೆ. ಅದು ಯಾರದ್ದೆಂದು ಪತ್ತೆಹಚ್ಚಲು ಸಾಧ್ಯವಾಗದ ಹಾಗೆ ಕೊಳೆತಿತ್ತು. ತಹಶೀಲ್ದಾರ ಒಂಟಿಲಿಮಠ ಆ ಎರಡು ಹೆಣಗಳ ಸಂಸ್ಕಾರ ಮಾಡಿಸಿದರು. ಆ ಬಾವಿ ನೀರಾನೆಲ್ಲಾ ತೆಗೆಸಿ ಹೂಳು ತೆಗೆದು ಸ್ವಚ್ಚಗೊಳಿಸಿದರೂ ಊರಿನ ಜನ ಆ ನೀರನ್ನು ಬಳಸಲು ಮುಂದೆ ಬರಲಿಲ್ಲ. ಈ ಕಥೆಯು ಇಂದಿನ ಸಮಾಜದಲ್ಲಿ ನಡೆಯುವ ನೈಜ ಘಟನೆಯನ್ನು ಯಥಾವತ್ತಾಗಿ ಚಿತ್ರಿಸಿದೆ.

**ಎಲೆಕ್ಷನ್ನೋ ಡೊಣ್ಣನಾಯ್ಕನ ಧೀಮಾಕೋ** ಎಂಬ ಕಥೆಯು ಇಂದಿನ ಲೋಕಸಭೆ ವಿಧಾನ ಸಭೆ ಮೊದಲಾದ ಚುನಾವಣೆಗಳ ಸನ್ನಿವೇಶಗಳನ್ನು ನೆನಪಿಗೆ ತರುತ್ತದೆ. ಹಳ್ಳಿಗಳಲ್ಲಿ ಅನೇಕ ರಾಜಕೀಯ ಪುಡಾರಿಗಳು ಹುಟ್ಟಿಕೊಂಡು ಮತದಾರರಿಗೆ ಹಣ ಹಂಚುವ ಮೂಲಕ ತಮ್ಮ ನಾಯಕನಿಗೆ ಮತ ನೀಡುವಂತೆ ಒತ್ತಡ ಹೇರವುದನ್ನು ಚಿತ್ರಿಸುತ್ತದೆ. ಚುನಾವಣೆ ಎಂಬುದು ಶಾಲೆಗೆ ಹೋಗುವ ಹುಡಗರನ್ನೂ ಸೆಳೆಯುತ್ತದೆ. ಊರಿನ ಹಳೆಯ ಮುದುಕ ಮುದಿಕಿಯರನ್ನು ಮರಳು ಮಾಡಿಸುತ್ತದೆ. ರಾಜಕೀಯದವರು ಓಟಿಗೆ ಕೊಡುವ ನೋಟು ಮುದಕ-ಮುದಿಕಿಯರಿಗೆ ಎಲೆ, ಅಡಿಕೆ, ಚಹಾ ಮೊದಲಾದ ಅವರ ದಿನನಿತ್ಯದ ಸಣ್ಣ ಪುಟ್ಟ ಖರ್ಚಿಗೆ ನೆರವಾಗುತ್ತೆಂದು ಭಾವಿಸುತ್ತಾರೆ. ಡೊಣ್ಣ ಊರಿನಲ್ಲಿ ಸಣ್ಣ ಪುಟ್ಟ ದಲ್ಲಾಳಿ ಕೆಲಸ ಮಾಡಿಕೊಂಡು ಜೀವನ ಸಾಗಿಸುವವನು. ಇವನಿಗೆ ಎಲೆಕ್ಷನ್ ಬಂತೆಂದರೆ ಹಬ್ಬವೋ ಹಬ್ಬ. ಚುನಾವಣೆ ಬಂತೆಂದರೆ ಡೊಣ್ಣ ಕ್ರಿಯಾಶೀಲ ಆಗ್ತಾನ ಎತ್ತಿನದಂದೆ, ಕುರಿದಂಧೆ, ಮರದ ದಂಧೆ ಹೀಗೆ ಯಾವ ದಂದೆ ಬಂದ್ರೂ ಹೋಗಂಗಿಲ್ಲಾ ಡೊಣ್ಣ "ಇದು ದೊಡ್ಡ ಆದಾಯ ಕಣಯ್ಯ ನೀ ಏನು ಐದು ಹತ್ತು ಖರ್ಚಿಗೆ ಕಮೀಷನ್ ಕೊಟ್ಟಿಯೇನು? ಆದಿತೇನು? ಒಂದು ಎಲೆಕ್ಷನ್ ಮಾಡ್ದೆ ಅಂದ್ರೆ ಕನಿಷ್ಟ ಐದಾರವಾರ ಯಾ  ಮಗತಾವ ಸಾಲಕ ಸಲಾಂ ಹೊಡಿಯೋ ಜರೂರತ್ ಬೀಳಗಿಂಲ್ಲಾ" ಎಂದು ಊರ ಮಂದಿ ಮುಂದೆ ವ್ಯವಹಾರದ ವರದಿ ಇಟ್ಟ, ಡೊಣ್ಣನ ಮಾತುಗಳನ್ನು ಗಮನಿಸಿದಾಗ ಇಂದು ನಡಯುವ ಚುನಾವಣೆಗಳು ಚುನಾವಣೆಗೆ ಸ್ವರ್ಧಿಸುವ ವ್ಯಕ್ತಿಗಳು ಮತ ಪಡೆಯುವ ಹಂಬಲದಲ್ಲಿ ಮತದಾರರಿಗೆ ಹಣದ ಹೊಳೆ ಹರಿಸುವುದನ್ನು ಕಾಣಬಹುದು. ಡೊಣ್ಣನಂತಹ ಮರಿಪುಡಾರಿಗಳು ಚುನಾವಣಾ ಸ್ವರ್ಧಾಳುಗಳಿಂದ ಲಕ್ಷಾಂತರ ರೂಪಾಯಿಗಳ ಹಣ ಪಡೆದು ಮತದಾರರ ಮನವೊಲಿಸುವ ಪ್ರಯತ್ನ ಮಾಡುತ್ತಾರೆ. "ನೋಡ ಖೂನ ನೀ ನನಗ ಹ್ವಾದ ಸಲ ಮೋಸ ಮಾಡಿ ನೀವ

ಹೇಳ್ದಂಗ ಧಣಿ" ಅಂದಿದೋನು ಮುಂಜಾನೆ ಮತ್ತೆ ಯಾವನ್ದೊ ಕೂಡ ಅಡ್ಡಾಡಕ ಹತ್ತಿದ್ದೆ. ಏನೋ ಎಳೆ ಎಮ್ಮಿ ಮಣಕ ಕೊಡಿಸಿಕೊಟ್ಟೆ. ಸಾವುಕಾರರಿಗೆ ಹೇಳಿ. ನಂಬಕಿ ಮನುಷ್ಯ ಸಾಹೇಬ್ರ, ಎಲ್ಲಾ ನಿಮಗೆ ಹಾಕ್ತಾರ ನಾ ಅದೀನಿ. ಹೆಚ್ಚು ಕಮ್ಮಿ ಆತಂದ್ರ, ಹೆಡಮುರಗಿ ಎತ್ತಸ್ತೀನಿ.ನೀವೇನ ಅಂಜಾಕ ಹೋಗಬ್ಯಾಡ್ರಿ ಅಂತ ಶಿಫಾರಸ್ಸು ಮಾಡಿದ್ರ ಮಕ್ಕಳ್ರ್ಯಾ ತಿಂದ ಮನಿ ಜಂತಿ ಎಣಸಿದ್ರಿ" ಡೊಣ್ಣನ ಈ ಮಾತುಗಳನ್ನು ಗಮನಿಸಿದಾಗ ಮತದಾರರಿಗೆ ರಾಜಕಾರಣಿಗಳು ಮಾಡುವ ಮೋಸ ಮತ್ತು ಮತದಾದರರು ರಾಜಕಾರಣಿಗಳಿಗೆ ಮಾಡುವ ಮೋಸ ವಂಚನೆ ತಿಳಿದು ಬರುತ್ತದೆ. ಇಂದಿನ ಸಮಾಜದಲ್ಲಿ ಇಂಥ ಘಟನೆಗಳು ನಡೆಯುವುದು ಸರ್ವೆ ಸಾಮಾನ್ಯವಾಗಿದೆ.

**ಎಲ್ಲಿಯೂ ಸಲ್ಲದವ** ಕಥೆಯಲ್ಲಿ ಪ್ರೊ. ಶಾಂತನಾಯ್ಕ ಅವರು ಪ್ರಸ್ತುತ ಸಮಾಜದಲ್ಲಿ ಕುಟುಂಬ ವಿಘಟನೆಯ ಚಿತ್ರಣವನ್ನು ನೈಜವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಯತಿರಾಜ ಸರ್ಕಾರಿ ನೌಕರಿ ಮಾಡುವವನು. ಅವನಿಗೆ ಗೋಪಾಲ, ನಂಜುಂಡ, ಮುತ್ತುರಾಜು ಎಂಬ ಅಣ್ಣಂದಿರಿದ್ದರು. ವಂದನಾ ಯತಿರಾಜನ ಪತ್ನಿ, ತುಂಬಾ ಒಳ್ಳೆಯವಳು. ಯತಿರಾಜ ಸರ್ಕಾರಿ ಕಛೇರಿಯೊಂದರಲ್ಲಿ ಗುಮಾಸ್ತನಾಗಿದ್ದ. ಅವನು ಸರ್ಕಾರಿ ಕೆಲಸಕ್ಕೆ ಸೇರಿದ್ದೆ ದೊಡ್ಡ ತಪ್ಪಾಗಿತ್ತು. ನಂದಿಪುರದಲ್ಲೇ ಇರುವ ಮೂವರು ಅಣ್ಣಂದಿರು ಇದ್ದೊಂದು ಮನೆಯೊಳಗೆ ಭಾಗ ಮಾಡಿಕೊಂಡಿದ್ದರು. ತಂದೆ-ತಾಯಿಯ ಸ್ಥಿತಿ ಅತಂತ್ರವಾಗಿತ್ತು. ಯತಿರಾಜು ತಾಯಿಗೆ "ಅವ್ವಯ್ಯ ನಂತಾವೆ ಬಂದು ಇರಬಾರ್ದ ನಾನೂವೇ ನಿಮ್ಮ ಮಗ ಅಲ್ವಾ, ನಾಕು ದಿನ ನೆಮ್ಮದಿಯಿಂದಿದ್ದು ಸತ್ರೇ ಸ್ವರ್ಗನಾದ್ರು ಸಿಕ್ಕೀತು"ಎಂದು ಪರಿಪರಿಯಾಗಿ ಕೇಳಿಕೊಂಡರೂ ಹಳ್ಳಿಯ ವಾತಾವರಣಕ್ಕೆ ಹೊಂದಿಕೊಂಡಿದ್ದರಿಂದ ಒಪ್ಪಲಿಲ್ಲ. ಯತಿರಾಜನನ್ನು ಅಣ್ಣಂದಿರು ನೋಡುವ ರೀತಿನೇ ಬೇರೆಯಾಗಿತ್ತು. ಅವರು ಕೀಳಿರಿಮೆಯಿಂದ "ನಿಂಗೆಂಲ್ಲಾ ತಿಂಗಳು ತುಂಬತಿದ್ದಂಗೆಯಾ ಕೈಗೆ ಇಡಿಗಂಟು ಬಂದ ಬೀಳ್ತದೆ ನಮ್ದು ಹಂಗಲ್ವಲ್ಲಾ ಹೊತ್ತಾರೆ ಹೋಗಿ ಗೇಯಬೇಕು ಮುನ್ನೂರ ಅರವತ್ತೈದು ದಿನವೂ ಗೇದ್ರೆ, ಒಸಿ ಕಾಸ ಕಂಡೇವು" ಎಂಬ ಚುಚ್ಚು ಮಾತುಗಳನ್ನು ಗಮನಿಸಿದರೆ ಯತಿರಾಜನ ಬಗ್ಗೆ ಅಣ್ಣಂದಿರಿಗೆ ಇದ್ದ ಮತ್ಸರವನ್ನು ತೋರಿಸುತ್ತದೆ.

ಯತಿರಾಜನ ಪತ್ನಿ ವಂದನಾಗೆ ಓರಗಿತ್ತಿಯರು ಸೇರಿ "ಹೂಂ ಬಂದ್ಲು ನೋಡ್ರೆ, ಮಾರಾಣಿ ಹೆಂಗೆ ಬೆಳ್ಳಗವ್ಳೆ ನಾಕದಿನ ನಮ್ಮಂಗ ಹ್ವಾರೆ ಮಾಡಕೆ ಬಂದ್ರೆ ಅವಳ ನಿಜಬಣ್ಣ ಹೊರಗ ಬೀಳ್ತದೆ" ಎಂದು ಹೀಯಾಳಿಸಿ ಮಾತನಾಡುವುದನ್ನು ಕೇಳಿ ಅವಳಿಗೆ ಊರಿಗೆ ಹೋಗುವುದೇ ಬೇಡ ಎನಿಸಿತ್ತು. ಚಿಕ್ಕಂದಿನಲ್ಲಿ ಒಟ್ಟಿಗೆ ಓದಿ ಆಡಿ ಬೆಳದ ಬಾಲ್ಯದ ಸ್ನೇಹಿತ ಮಾದೇಶನಿಗೂ ಯತಿರಾಜ ಭಿನ್ನವಾಗಿ ಕಂಡಿದ್ದ. "ನೀ ಏನ್ಲಾ ಈಗ ದೊಡ್ಡ ಮನ್ಸಾ ನಾವು ಅಂದ್ರೆ ಇಲ್ಲೇ ಈ ಹಳ್ಳಿಯೊಳಗೆ ಬದಕೋರು ಬಹಳ ಅಂದ್ರೆ ಕಾಸರಗೋಡು, ಮಂಗಳೂರು, ಗೋವಾ ಅಂತ ದುಡಿಯೋಕೆ ನಾಕದಿನ ಹೊರಗೆ ಹೋದೇವು ವಿನಃ ಎದ್ರು ಬಿದ್ರು ಈ ಹಳ್ಳಿನೇ ಗತಿ" ಎಂಬ ಮಾದೇಶನ ಮಾತುಗಳಲ್ಲಿ ಅಸಹನೆತುಂಬಿದೆ. ತನ್ನ ಸ್ನೇಹಿತ ಯತಿರಾಜು ಸರ್ಕಾರಿ ನೌಕರಿ ಮಾಡುವ ಬಗ್ಗೆ ಪ್ರೀತಿಯಿಲ್ಲ, ಮತ್ಸರ ಇರುವುದು ಕಂಡುಬರುತ್ತದೆ.

ಯತಿರಾಜ ಶಾಲೆ ಕಾಲೇಜಿಗೆ ಹೋಗುವಾಗ ಅಣ್ಣಂದಿರು ಹೆಮ್ಮೆಪಡುತ್ತಿದ್ದರು. ಹಿರಿಯಣ್ಣ ಗೋಪಾಲ ಮದುವೆಯಾಗುತ್ತಿದ್ದಂತೆ ಸಂಬಂಧಗಳು ಕಳಚಲು ಪ್ರಾರಂಭಿಸಿದ್ದವು. ಯತಿರಾಜನಿಗೆ ಆರಂಭದಲ್ಲಿ ನೌಕರಿ ಸಿಗದಿದ್ದಾಗ ಅವನು ತನ್ನ ಕೈಲಾದ ಕೆಲಸ ಮಡುತ್ತಾ ಪರಿಸ್ಥಿತಿಗೆ ಹೊಂದಿಕೊಳ್ಳುವ ಪ್ರಯತ್ನ ಮಾಡಿದರೂ ಪರಿಸ್ಥಿತಿ ಅವನ ವಿರುದ್ಧ ಇತ್ತು. ಆ ಕೂಡಲೇ ಯತಿರಾಜ ನಂದಿಪುರ ಬಿಟ್ಟು ಪಟ್ಟಣ ಸೇರಿ ತೀವ್ರಪ್ರಯತ್ನ ಮಾಡಿ ಸರ್ಕಾರಿ ನೌಕರಿ ಗಿಟ್ಟಿಸಿಕೊಂಡಿದ್ದ. ಆರಂಭಕ್ಕೆ ತನ್ನ ಕೈಲಾದಷ್ಟು ಹಣ ಕಳುಹಿಸುತ್ತಿದ್ದ. ಆಗ ಮನೆ ಮಂದಿಂಯಲ್ಲಾ ತುಂಬಾ ಖುಷಿ ಪಡುತ್ತಿದ್ದರು. ಆದರೆ ಯತಿರಾಜ ಮದುವೆ ಮಾಡಿಕೊಂಡ ಮೇಲೆ ಕಟ್ಟಿಗೆಯಿಂದ ಹಿಡಿದು ನೀರಿನವರಗೆ ಕೊಂಡು ಕೊಂಡೆ ಜೀವನ ನಡೆಸುವ ಪರಿಸ್ಥಿತಿಗೆ ಸಿಲುಕಿ ಮನೆಗೆ ಹಣ ಕಳುಹಿಸುವುದು ನಿಲ್ಲಿಸಿದ. ಆಗ ಮನೆ ಮಂದಿ ಸಹಜವಾಗಿ "ನಾವು ಕಷ್ಟ ಪಟ್ಟು ಓದಿಸಲಿಲ್ಲಾ? ಈಗ ನೌಕರಿ ಸಿಕ್ಕಿದೆ ಅವನ ಪಾಡಿಗೆ ಅವನು ಹೊಂಟೋದ ನಮ್ಮ ಮಕ್ಕಳು ಮರಿಗಳನ್ನು ಕರ್ಕೊಂಡು ಹೋಗಿ ಓದಿಸಬಾರ್ದ" ಎಂಬ ಮಾತುಗಳು ಬಂದವು. ಯತಿರಾಜನ ನೌಕರಿ ಚಿಕ್ಕದು ಸಂಬಳವೂ ತೀರ ಕಡಿಮೆ ಆದರೆ ಇದನ್ನು ಅರ್ಥ ಮಾಡಿಕೊಳ್ಳದ ಅಣ್ಣಂದಿರು ಅವನ ಜೊತೆ ಸಂಬಂಧ ಕಳಚಿಕೊಂಡುರಿವುದು ಇಂದಿನ ಸಮಾಜದ ಪರಿಸ್ಥಿತಿಯನ್ನು ತಿಳಿಸುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 77 ವರ್ಷಗಳು ಕಳೆದರೂ ಜಾತಿಯ ಭೂತ ಇನ್ನೂ ಜೀವಂತವಾಗಿದ್ದು ಮೇಲ್ವರ್ಗದ ಜನರು ಶ್ರೇಷ್ಠತೆಯ ವ್ಯಸನದಲ್ಲಿ ಇನ್ನೂ ಸಿಲುಕಿರುವುದು ಇಂದಿಗೂ ಸಮಾಜದಲ್ಲಿ ಕಂಡುಬರುವುದನ್ನು **ಮರದಾಚೆ ಕುಲ ಇಣಕಿದೊಡೆಂತಯ್ಯ** ಎಂಬ ಕಥೆಯಲ್ಲಿ ಪ್ರೊ.ಶಾಂತನಾಯ್ಕ ಅವರು ಅಭಿವ್ಯಕ್ತಿಸಿದ್ದಾರೆ. ಮಂಗಳೂರು ಮೂಲದ ಬ್ಯಾಂಕ್ ಉದ್ಯೋಗಿ ಸುಬ್ರಹ್ಮಣ್ಯಕಿಣಿ ಮತ್ತು ಅವರ ಪತ್ನಿ ಸುಮಾಕಿಣಿ ತಾನಿರುವ ಊರಲ್ಲಿ ವಿಶಾಲವಾದ ನಿವೇಶನ ಖರೀದಿಸಿ ಮನೆಕಟ್ಟಿಕೊಂಡು ವಾಸಿಸುತ್ತಿದ್ದರು. ಅವರ ಪಕ್ಕದ ಮನೆಯಲ್ಲಿ ಕೆಳಜಾತಿಯ ಒಂದು ಕುಟುಂಬ ವಾಸಿಸುತ್ತಿತ್ತು. ಅವರಿಗೆ ಮೂವರು ಹೆಣ್ಣುಕ್ಕಳು ಇದ್ದರು. ಇವರೊಂದಿಗೆ ಕಿಣಿಯವರು ತುಂಬಾ ಅನ್ಯೋನ್ಯವಾಗಿದ್ದರು. ಆ ಹೆಣ್ಣು ಮಕ್ಕಳು ಕಿಣಿಯವರು ಊರಿಗೆ ಹೋದಾಗ ಅವರ ಮನೆಯ ಆವರಣದಲ್ಲಿ ಮಾವು, ಬಾಳೆ, ತೆಂಗು ಮೊದಲಾದ ಸಸಿಗಳಿಗೆ ನೀರು ಹಾಕುತ್ತಿದ್ದರು. ಆ ಸಸಿಗಳು ಬೆಳೆದು ದೊಡ್ಡವಾದ ಮೇಲೆ ಪಕ್ಕದಮನೆಯವರು ಕೀಳು ಜಾತಿ ಎಂದು ತಿಳಿದು ಹೀಯಾಳಿಸಿ ಬೈಯ ತೊಡಗಿದರು. ಅಲ್ಲದೆ ಆ ಮೂವರು ಹೆಣ್ಣುಮಕ್ಕಳು ಓದಿ ರಾಂಕ್ ತೆಗೆದುಕೊಂಡಾಗ ಹೀಯಾಳಿಸುವ ಮಾತುಗಳು ಇನ್ನೂ ಜಾಸ್ತಿಯಾದವು "ಇವತ್ತು ಕೆಳ ಜನರದ್ದೇ ಕಾಲ ರಿಸರ್ವೇಷನ್ ಮಂದಿ ಏನಾದ್ರೂ ಮಾಡತಾರೆ. ನಮ್ಮ ಕುಲದವರಿಗೆ ಎಲ್ಲಿ ಕೆಲ್ಸಸಿಗುತ್ತದೆ"? ಎಂದು ಪಕ್ಕದ ಮನೆಯವರ ಬಗ್ಗೆ ಮಾತನಾಡಿಕೊಳ್ಳುತ್ತಾರೆ. ಮಕ್ಕಳಿಲ್ಲದ ಕಿಣಿ ದಂಪತಿಗಳು ಏನೇ ಆಡಿಕೊಂಡರೂ ಕ್ಯಾರೇ ಅನ್ನದ ಕೆಳಜಾತಿಯವರ ವಿರುದ್ಧ ರಾಮಕೃಷ್ಣನಗರ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟರು. ಸಾಲದಕ್ಕೆ ಅವರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ತಮ್ಮ ಕುಲದವನೇ ಆದ ಎಂ.ಎಲ್.ಎ. ಗೆ ಹೇಳಿ ಇನ್‌ಸ್ಪೆಕ್ಟರ್ ಇಲ್ಲದಾಗ ಠಾಣೆಯಲ್ಲಿ ಇನ್‌ಸ್ಪೆಕ್ಟರ್‌ನ್ನು ಎತ್ತಂಗಡಿ ಮಾಡಿಸುವುದಾಗಿ ಬೆದರಿಕೆ ಹಾಕಿದ್ದ. ಕೇಸ್ ದಾಖಲಿಸಿಕೊಂಡ ಇನ್‌ಸ್ಪೆಕ್ಟರ್ ಸ್ಥಳ ಪರಿಶೀಲಿಸಿ ಕಿಣಿಯವರದ್ದೆ ತಪ್ಪು ಎಂದು ತಿಳಿದು ಅವರಿಗೆ ಹೆಚ್ಚು ಕಡಿಮೆ

ಮಾತನಾಡಿದರೆ ಅವರ ವಿರುದ್ಧವೇ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿ ಸಮಸ್ಯೆಯನ್ನು ತಿಳಿಗೊಳಿಸಿದ. ಹೀಗೆ ಸಾಮಾಜಿಕ ವ್ಯವಸ್ಥೆಯಲ್ಲಿ ಕೆಳವರ್ಗದವರ ಪರ ಕಾನೂನಿದ್ದರೂ ಮೇಲ್ವರ್ಗದ ಕೆಲವರು ಶ್ರೇಷ್ಠತೆಯ ಅಮಲಿನಲ್ಲಿ ಕೆಳವರ್ಗದವರಿಗೆ ಕಿರುಕುಳ ನೀಡುವ ದೌರ್ಜನ್ಯ ಎಸಗುವ ಕಾರ್ಯ ಇಂದಿಗೂ ನಿರಂತರವಾಗಿ ನಡೆಯುವುದನ್ನು ಪ್ರೊ. ಶಾಂತನಾಯ್ಕರು ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ.

ಬಸ್ ಅಪಘಾತದ ಪರಿಹಾರವಾಗಿ ಸರ್ಕಾರದ ಹಣ ಜನರಿಗೆ ಪುಕ್ಕಟೆ ಬರಬೇಕೆಂಬ ಮನಸ್ಥಿತಿಯವರನ್ನು ಕುರಿತು ಪ್ರೊ. ಶಾಂತನಾಯ್ಕ ಅವರು **ಅಪಘಾತದಾಚೆಯ ಆಘಾತವೋ** ಎಂಬ ಕಥೆಯಲ್ಲಿ ವ್ಯಕ್ತಪಡಿಸಿದ್ದಾರೆ. ಗುಡದ ತಾಂಡದ ನಂಜೂರ ಅವನ ಪತ್ನಿ ರುಕ್ಕಿ ಇಬ್ಬರೂ ಸೇರಿ ನಂಜೂರನ ತಮ್ಮ ಡಿಬರನ ಮದುವೆಗೆ ಹೋಗುತ್ತಿದ್ದ ಬಸ್ಸು ತುಂಗಭದ್ರಾ ನಾಲೆಯ ದಿಬ್ಬ ಏರುವಾಗ ಪಲ್ಟಿ ಹೊಡೆದು ಬಿತ್ತು. ಹರಪನಹಳ್ಳಿ ಠಾಣೆಯಲ್ಲಿ ಕೇಸು ದಾಖಲಾಗಿತ್ತು. ನಂಜೂರನ ಹೇಣ್ತಿ ರುಕ್ಕಿ ಎಂಥ ಪಿಲಾನ್ ಮಾಡ್ತೀರಿ ನೀವು ಮದ್ಲು ರೊಕ್ಕ ಏಟ ಬಂದೈತಿ ಅನ್ನೊ ವಿಚಾರ ತಿಳ್ಕೋಬಾರದ ನಮ್ಮ ಮಾಡಿ ಮ್ಯಾಲಿನ ಮನಿ ಸಂಕವ್ವ ಮೂರ ಮೂರ ಬಂಗಾರ ಸರ ಹಕ್ಕೊಂಡಾಳ ಕೆಳಗಿನ ಮನಿ ಕಲ್ಲುನ ಹೆಂತ್ತಿ ಸಂಪಿ ಎಲ್ಡು ಕೈಗ ನಾಕ ನಾಕ ಬಳಿ ಹಕ್ಕೊಂಡಾಳ" ಎಂದ ರುಕ್ಕಿ ಮಾತಿಗೆ ನಂಜೂರ "ಹಂಗೆಲ್ಲಾ ಕೇಳಬಾರ್ದು ಕಣೆ ರೊಕ್ಕ ಬಂದೈತೋ ಇಲ್ಲೋ ಯಾವನ ಬಲ್ಲ ಹಕಿಕತ್ ಏನೂಂತ ತಿಳ್ಕೊಳ್ಳದೆ ದುಡ್ಡಿನ ವಿಷಯ ಕೇಳ ಬಾರ್‌ದು" ಎಂಬ ನಂಜೂರನ ಮಾತುಗಳು ಸಮಾಜದಲ್ಲಿ ಸತ್ಯವಂತರೂ ಇದ್ದಾರೆಂಬುದು ತಿಳಿಸುತ್ತದೆ.

ಮೂರು ವರ್ಷದ ನಂತರ ಕೇಸು ಹರಪನಹಳ್ಳಿ ಕೋರ್ಟಿನಲ್ಲಿ ವಿಚಾರಣೆಗೆ ಬಂದಾಗ ನಂಜೂರನೇ ಪ್ರಮುಖ ಸಾಕ್ಷಿ. ಡ್ರೈವರ್ ಹನುಮೇಶಿ ಭವಿಷ್ಯ ಮತ್ತು ಅಪಘಾತದಲ್ಲಿ ಸಿಕ್ಕಿಕೊಂಡ ಜನರ ಬದುಕು ನಂಜೂರನ ಕೈಯಲ್ಲಿತ್ತು. ಡ್ರೈವರ್ ಹನುಮೇಶಿ ನಂಜೂರನ ಹತ್ತಿರ ಬಂದು "ನನ್ನ ನೌಕರಿ ಹೆಂಡ್ರ ಮಕ್ಕಳ ಜೀವನ ನಿಮ್ಮ ಕೈಯಲ್ಲಿದೆ ಬೆನ್ನಮ್ಯಾಲ ಹೊಡಿರಿ ಆದ್ರ ಹೊಟ್ಟಿ ಮ್ಯಾಲ ಹೊಡಿಬ್ಯಾಡ್ರಿ" ಎಂದ. ಈ ಮಾತು ನಂಜೂರನಿಗೆ ಒಂದು ಕಡೆ ಸರ್ಕಾರದ ರೊಕ್ಕತಗೊಂಡು ಮಜಾ ಮಾಡಕ ಕಾಯ್ತಿರೋ ಜನ ಬರೋದ್ರಾಗ ಹತ್ತು ಪರ್ಸೆಂಟ್‌ಗಾಗಿ ಬಾಯಿಬಿಡ್ತಿರೊ ನಾಗರಾಜ ವಕೀಲರು ಚಾ ಕ್ಕೆನಾದ್ರು ಸಿಕ್ಕಿತಂತ ಮುಂದೆ ಮುಂದೆ ಬಂದು ಕೇಸಿನ ಹಾಳೆಕೊಡೋ ಪೋಲೀಸ್. ನಿರಪರಾಧಿಯೋ ಅಪರಾಧೀಯೋ ಕೆಲಸ ಕಳಕೊಳ್ಳಲಿರೋ ಹನುಮೇಶಿ ಡ್ರೈವರ್. ಈ ಎಲ್ಲಾ ವಿಚಾರಗಳು ನಂಜೂರನಿಗೆ ಏನು ನಿರ್ದಾರ ಕೈಗೊಳ್ಳಬೇಕೆಂದು ತಿಳಿಯಲ್ಲಿಲ್ಲ. ಕೊನೆಗೆ ವಿಚಾರಣೆಯಲ್ಲಿ ನ್ಯಾಯಧೀಶರ ಎದುರು 'ನಾನು ಏನೂ ಹೇಳಲಾರೆ' ಎಂದು ಹೇಳುವುದರ ಮೂಲಕ ನಿರ್ಧಾರವನ್ನು ನ್ಯಾಯಧೀಶರಿಗೆ ಬಿಟ್ಟು ತನ್ನ ಪ್ರಾಮಣಿಕತನ ಮೆರೆದನು. ಈ ಕಥೆಯು ಇಂದು ಸರ್ಕಾರದ ಹಣ ಲೂಟಿಮಾಡಲು ಅಥವಾ ದುರುಪಯೊಗ ಅಥವಾ ಸ್ವಾರ್ಥಕ್ಕೆ ಬಳಸಿಕೊಳ್ಳುವ ಜನರ ಮನಸ್ಥಿತಿಯನ್ನು ಎತ್ತಿ ತೋರಿಸುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಪ್ರೊ.ಶಾಂತನಾಯ್ಕರ ಕಥೆಗಳು ಸಮಾಜದ ನೈಜ ಘಟನೆಗಳನ್ನು ಹಿಡಿದಿಟ್ಟಿವೆ. ಸಾಮಾಜಿಕ ಪ್ರಜ್ಞೆ ಉಳ್ಳ ಮನಸ್ಸುಗಳು ಸಮಾಜದಲ್ಲಿರುವ

ಸ್ವಾರ್ಥ, ದರ್ಪ, ದೌರ್ಜನ್ಯ, ಮೇಲು, ಕೀಳು ಎಂಬ ಭಾವನೆಗಳನ್ನು ಬೇರು ಸಮೇತ ಕೀಳುವ ಪ್ರಯತ್ನ ಮಾಡಿವೆ. ಈ ಕಥೆಗಳು ಸಾಮಾಜಿಕ ವ್ಯವಸ್ಥೆಯ ನೈಜ ಚಿತ್ರಣವನ್ನು ಅನಾವರಣಗೊಳಿಸುತ್ತವೆ. ಸಮಾಜದಲ್ಲಿರುವ ಮನಸ್ಸುಗಳಲ್ಲಿ ತುಂಬಿರುವ ಆಸೆ ಆಮಿಷಗಳು ಮನುಷ್ಯನನ್ನ ದುರ್ಬಲಗೊಳಿಸಿರುವದನ್ನ ಕಾಣಬಹುದು. ಇಲ್ಲಿನ ಕಥೆಗಳು ಸ್ವಾರ್ಥ ತುಂಬಿದ ಸಮಾಜದ ಮನಸ್ಸುಗಳು, ನಿಸ್ವಾರ್ಥದಿಂದ ನಡೆಯುವ ಮನಸ್ಸುಗಳ ನಡುವೆ ಇರುವ ಅಂತರ ಎತ್ತಿ ತೋರಿಸುತ್ತವೆ. ಹಾಗೂ ಸಾಮಾಜಿಕ ಪ್ರಜ್ಞೆಯುಳ್ಳ ಮನುಷ್ಯರು ಹೊಣೆಗಾರಿಕೆಯನ್ನು ನೈಜವಾಗಿ ಚಿತ್ರಿಸಲು ಪ್ರಯತ್ನಿಸಿವೆ.

**ಆಕರ ಗ್ರಂಥ:**

1. ಶಿರಗಾನಹಳ್ಳಿ ಶಾಂತಾನಾಯ್ಕ. (2023). ಕಲ್ಲೇ ಕಲ್ಲೇ ಕಥೆಹೇಳು. ಸಿ.ವಿ.ಜಿ. ಪಬ್ಲಿಕೇಷನ್. ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.